ಸ್ಥಾಪನೆ : ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

## ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ ಹಾಗೂ ಆವರಣದ ನವೀಕೃತ ಕಟ್ಟಡದ

## ಉದ್ಘಾಟನಾ ಸಮಾರಂಭ
## ಆಹ್ವಾನ ಪತ್ರಿಕೆ





ಶುಕ್ರವಾರ : ೨೬-೮-೨೦೨೨ । ಸಮಯ : ಸಂಜೆ : ೫-೦೦ಕ್ಕೆ




## ಸರ್ವರಿಗೂ ಆದರದ ಸ್ವಾಗತ

**ನಾಡೋಜ ಡಾ. ಮಹೇಶ ಜೋಶಿ**
ಅಧ್ಯಕ್ಷರು

**ನೇ.ಭ. ರಾಮಲಿಂಗಶೆಟ್ಟಿ**
ಗೌರವ ಕಾರ್ಯದರ್ಶಿ

**ಕೆ. ಮಹಾಲಿಂಗಯ್ಯ**
ಗೌರವ ಕಾರ್ಯದರ್ಶಿ

**ಬಿ.ಎಂ. ಪಟೇಲ್‌ಪಾಂಡು**
ಗೌರವ ಕೋಶಾಧ್ಯಕ್ಷರು

ಸ್ಥಾಪನೆ : ೧೯೧೫

# ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ ಹಾಗೂ ಆವರಣದ ನವೀಕೃತ ಕಟ್ಟಡದ

## ಉದ್ಘಾಟನಾ ಸಮಾರಂಭ

ಉದ್ಘಾಟನೆ : **ಶ್ರೀ ಬಸವರಾಜ ಬೊಮ್ಮಾಯಿ**
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ



ಅಧ್ಯಕ್ಷತೆ : **ನಾಡೋಜ ಡಾ. ಮಹೇಶ ಜೋಶಿ**
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು



ಮುಖ್ಯ ಅತಿಥಿಗಳು : **ಶ್ರೀ ಆರ್. ಅಶೋಕ್**
ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ



**ಶ್ರೀ ಸುನೀಲ್ ಕುಮಾರ್**
ಮಾನ್ಯ ಸಚಿವರು, ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ



**ಶ್ರೀ ಬಿ.ಸಿ. ನಾಗೇಶ್**
ಮಾನ್ಯ ಸಚಿವರು, ಪ್ರಾಥಮಿಕ ಮತ್ತು
ಪ್ರೌಢ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ



ವಿಶೇಷ ಅತಿಥಿಗಳು : **ಡಾ. ಚಂದ್ರಶೇಖರ ಕಂಬಾರ**
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು



**ಶ್ರೀಮತಿ ಕಮಲಾ ಹಂಪನಾ**
ಹಿರಿಯ ಸಾಹಿತಿಗಳು



**ಡಾ. ದೊಡ್ಡರಂಗೇಗೌಡ**
೮೬ನೇ ಅಖಿಲ ಭಾರತ ಸಾಹಿತ್ಯ
ಸಮ್ಮೇಳನದ ನಿಯೋಜಿತ ಅಧ್ಯಕ್ಷರು



# ಶ್ರೀ ಕೃಷ್ಣರಾಜ ಪರಿಷತ್ತು ಮಂದಿರದ ಕುರಿತು ಹಿನ್ನೆಲೆ





ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ ಆದಾಗ ಅದರ ಕಚೇರಿ ಪ್ರಾರಂಭವಾದದ್ದು ಚಾಮರಾಜಪೇಟೆಯ ೪ನೆಯ ಮುಖ್ಯರಸ್ತೆಯಲ್ಲಿ. ಪರಿಷತ್ತಿಗೆ ಸ್ವಂತ ನಿವೇಶನದ ಕನಸು ಕಂಡವರು ಕರ್ಪೂರ ಶ್ರೀನಿವಾಸರಾಯರು. ಅದಕ್ಕೆ ಇಂಬು ನೀಡಿದವರು ಅಂದಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್. ಇವರ ಪ್ರಯತ್ನದಿಂದ ಶ್ರೀ ಕೃಷ್ಣರಾಜ ಪರಿಷತ್ತು ಮಂದಿರದ ಈಗಿನ ನಿವೇಶನ ದೊರಕಿತು. ಇದು ಮೊದಲು ವಿಶಾಲವಾದ ಬಯಲು ಪ್ರದೇಶವಾಗಿತ್ತು. ಇಲ್ಲಿ ಭಾರತ ಸ್ವಾತಂತ್ರ್ಯ ಚಳುವಳಿಯ ಎಲ್ಲ ಸಭೆಗಳೂ ನಡೆಯುತ್ತಿದ್ದವು. ಹೀಗಾಗಿ ಜನರು ಇದನ್ನು **'ಗಾಂಧಿ ಮೈದಾನ'**ವೆಂದು ಕರೆಯುತ್ತಿದ್ದರು ಸರಕಾರದಿಂದ ಪ್ರಸ್ತುತ ಸ್ಥಳ ಪರಿಷತ್ತಿಗೆ ದಾನವಾಗಿ ದೊರೆಯಿತು.

೧೯೩೧ನೆಯ ಇಸವಿ ಏಪ್ರಿಲ್ ೧೨ನೆಯ ತಾರೀಖು ಕಟ್ಟಡದ ಶಂಕುಸ್ಥಾಪನೆ ನೆರವೇರಿತು. ಸ್ವತಃ ಇಂಜಿನಿಯರ್ ಆಗಿದ್ದ ಶ್ರೀನಿವಾಸರಾಯರು ಕಟ್ಟಡದ ವಿನ್ಯಾಸ ಮತ್ತು ರಚನೆಗೆ ಗಮನ ಕೊಟ್ಟಿದ್ದು ಮಾತ್ರವಲ್ಲದೆ, ಕಟ್ಟಡ ನಿರ್ಮಾಣಕ್ಕೆ ಹಣ ಸಂಗ್ರಹಿಸಿದರು. ಕಟ್ಟಡ ನಿಧಿಗಾಗಿ ಶ್ರೀಮನ್ ಮಹಾರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರು ಮೂರು ಸಾವಿರ ರೂಪಾಯಿಗಳನ್ನು, ಅಂದು ಪರಿಷತ್ತಿನ ಅಧ್ಯಕ್ಷರಾಗಿದ್ದ ರಾಜಬಂಧು ಎಂ. ಕಾಂತರಾಜ ಅರಸ್ ಅವರು ಐದು ಸಾವಿರ ರೂಪಾಯಿಗಳನ್ನು ಉದಾರವಾಗಿ ದಾನ ನೀಡಿದರು. ಪರಿಷತ್ತು ಸುಮಾರು ಎರಡೂವರೆ ಸಾವಿರ ರೂಪಾಯಿಗಳನ್ನು ಸಂಗ್ರಹ ಮಾಡಿತು. ಸರ್ ಮಿರ್ಜಾ ಇಸ್ಮಾಯಿಲ್ ಸರಕಾರದಿಂದ ೧೫,೨೮೬-೦೦ ರೂಪಾಯಿ ಗಳನ್ನು ಮಂಜೂರು ಮಾಡಿಸಿದರು. ಶ್ರೀ ಕೃಷ್ಣರಾಜ ಪರಿಷನ್ಮಂದಿರ ಕಟ್ಟಡದ ಮೂಲ ಸ್ವರೂಪ ಈಗಿರುವಂತೆ ಇರಲಿಲ್ಲ. ಸಭಾಂಗಣವನ್ನು ಮೂರು ವಿಶಾಲ ಕೊಠಡಿಗಳಾಗಿ ರೂಪಿಸಲಾಗಿತ್ತು. ಒಮ್ಮೆ ನಗರ ಪ್ರದರ್ಶನಕ್ಕೆ ಬಂದಾಗ ಇದನ್ನು ಕಂಡ ಸರ್ ಮಿರ್ಜಾ ಇಸ್ಮಾಯಿಲ್ ಅವರು ಪರಿಷತ್ತು ಬರೀ ಕಚೇರಿ ಆಗಬಾರದು. ಅದು ಬಹು ಸಂಖ್ಯೆಯಲ್ಲಿ ಸಾರ್ವಜನಿಕರು ಸೇರುವ ಸಾಂಸ್ಕೃತಿಕ ಚಟುವಟಿಕೆ ತಾಣವಾಗಬೇಕು ಎಂದು ಸೂಚಿಸಿದರು. ಇದರಿಂದಾಗಿ ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ ರೂಪುಗೊಂಡಿತು.

ಕರ್ಪೂರ ಶ್ರೀನಿವಾಸರಾಯರು, ಬೆಳ್ಳಾವೆ ವೆಂಕಟನಾರಾಯಣಪ್ಪನವರು ಕಟ್ಟಡ ರೂಪಿಸುವಲ್ಲಿ ಸಾಕಷ್ಟು ಶ್ರಮಿಸಿದರು. ೧೯೩೩ ಮೇ ೨೬ರ ಶುಕ್ರವಾರದಂದು ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ ಅಧಿಕೃತವಾಗಿ ಉದ್ಘಾಟನೆಯಾಯಿತು.

ಕಳೆದ ಒಂಬತ್ತು ದಶಕಗಳಿಂದ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಹಲವು ಚಾರಿತ್ರಿಕ ಘಟನೆಗಳಿಗೆ ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ ಸಾಕ್ಷಿಯಾಗಿದೆ. ನಾಡಿನ ಭವ್ಯ ಪರಂಪರೆಯನ್ನು ಅದು ಶ್ರೀಮಂತಗೊಳಿಸಿದೆ. ಆದರೆ ಕಾಲನ ಹೊಡೆತಕ್ಕೆ ಸಿಕ್ಕಿ ಇದು ಶಿಥಿಲಾವಸ್ಥೆಯನ್ನು ತಲುಪಿತ್ತು. ಇದನ್ನು ಗಮನಿಸಿದ ನಾಡಿನ ಅನೇಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ದಿಗ್ಗಜರು ಪರಿಷತ್ತು ಮಂದಿರವನ್ನು ನವೀಕರಣಗೊಳಿಸುವಂತೆ ಆಶಿಸಿದ್ದರು. ಇದೇ ಅಭಿಲಾಷೆ ನನ್ನದಾಗಿತ್ತು. ಜೊತೆಗೆ "ಕನ್ನಡ ಸಾಹಿತ್ಯ ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿಸುವ" ನನ್ನ ಆಶಯ ಕೂಡ ಇದಕ್ಕೆ ಪೂರಕವಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತು ಒಂದು ಕೋಟಿ ಸದಸ್ಯರನ್ನು ಹೊಂದಬೇಕು ಎನ್ನುವುದು ನನ್ನ ಇನ್ನೊಂದು ಕನಸು. ಅದಕ್ಕೆ 'ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ' ಸಂಪೂರ್ಣ ನವೀಕರಣಗೊಳ್ಳುವುದು ಅತ್ಯಗತ್ಯವಾಗಿತ್ತು.

ಈಗ ಕಂಡ ಕನಸು ನನಸಾಗಿದೆ. 'ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ' ಸಂಪೂರ್ಣ ನವೀಕರಣಗೊಂಡಿದೆ. ಆಧುನಿಕ ಕಾಲಘಟ್ಟಕ್ಕೆ ತಕ್ಕಂತೆ ಹವಾನಿಯಂತ್ರಿತ ಸಭಾಂಗಣ, ಸುಸಜ್ಜಿತ ಆಸನ ವ್ಯವಸ್ಥೆ, ಸಮರ್ಪಕ ಧ್ವನಿ, ಬೆಳಕಿನ ವಿನ್ಯಾಸ ಹೀಗೆ ಹೊಸ ಕಾಲಘಟ್ಟಕ್ಕೆ ತಕ್ಕಂತೆ ರೂಪುಗೊಂಡಿದೆ. ಆದರೆ ಪರಂಪರೆಯ ಲಕ್ಷಣಗಳನ್ನು ಕೂಡ ಬಳಸಿಕೊಂಡಿದೆ. ನಿನ್ನೆ ಮತ್ತು ನಾಳೆಗಳ ನಡುವಿನ ಸೇತುವೆಯಂತಿರುವ ಇದು ಆಧುನಿಕ ಕಾಲಕ್ಕೆ ಇತಿಹಾಸವನ್ನು ಜೋಡಿಸುವ ಮಹತ್ತರ ಕಾರ್ಯವನ್ನು ಮಾಡಿದೆ. ಜನಸಾಮಾನ್ಯರ ಕೈಗೆ ಎಟುಕುವಂತೆ, ಸಾಂಸ್ಕೃತಿಕ ಲೋಕಕ್ಕೆ ಪೂರಕವಾಗುವಂತೆ, ಪರಂಪರೆಗೆ ರೂಪಕವಾಗುವಂತೆ ರೂಪುಗೊಂಡಿರುವ ಇದು ಬೆಂಗಳೂರಿನ ಪ್ರಮುಖ ಸಾಂಸ್ಕೃತಿಕ ಹೆಗ್ಗುರುತು ಎನಿಸಿಕೊಳ್ಳುವಂತೆ ವಿನ್ಯಾಸಗೊಂಡಿದೆ. 'ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ' ಈಗ ಲೋಕಾರ್ಪಣೆಗೆ ಸಿದ್ಧವಾಗಿದ್ದು ಹೊಸ ಯುಗ ಆರಂಭವಾಗಲಿದೆ.

ಇಂತಹ ಚಾರಿತ್ರಿಕ ಸನ್ನಿವೇಶಕ್ಕೆ ತಾವು ಸಾಕ್ಷಿಗಳಾಗಬೇಕೆಂಬುದು ನನ್ನ ಅಭಿಲಾಷೆ.

**ನಾಡೋಜ ಡಾ. ಮಹೇಶ ಜೋಶಿ**
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಸ್ಥಾಪನೆ : ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

## ಶ್ರೀ ಕೃಷ್ಣರಾಜ ಪರಿಷತ್ತು ಮಂದಿರ ಹಾಗೂ ಆವರಣದ ನವೀಕೃತ ಕಟ್ಟಡದ

## ಉದ್ಘಾಟನಾ ಸಮಾರಂಭ
## ಆಹ್ವಾನ ಪತ್ರಿಕೆ

**ಶುಕ್ರವಾರ : ೨೬-೮-೨೦೨೨ । ಸಮಯ : ಸಂಜೆ : ೪-೩೦ಕ್ಕೆ**



ಶ್ರೀಮತಿ/ಶ್ರೀ ______________________________

______________________________

______________________________

ದೂರವಾಣಿ : ೦೮೦ ೨೬೬೧೨೯೯೧ / ೨೬೬೨೩೫೮೪
೦೮೦ ೨೨೪೨೩೮೬೭ / ೨೬೬೭೨೯೯೨